# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 313
2. ಮಾನ್ಯ ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
3. ಉತ್ತರಿಸಬೇಕಾದ ದಿನಾಂಕ : 13.09.2022
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಮುಚ್ಚಿ ವರ್ಷಗಳೇ ಕಳೆದರೂ ಅಲ್ಲಿನ ಕಾರ್ಮಿಕರು ಕಳೆದ ಮೂರ್ನಾಲ್ಕು ವರ್ಷಗಳಿಂದ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಬಂದಿದ್ದಲ್ಲಿ, ಆ ಕಾರ್ಮಿಕರಿಗೆ ಬಾಕಿ ನೀಡಬೇಕಾಗಿದ್ದ ವೇತನ ನೀಡದಿರಲು ಕಾರಣವೇನು ; | ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಸಂಕಷ್ಟದಲ್ಲಿದ್ದು, ಪ್ರಸ್ತುತ ಅಂದಾಜು ರೂ.333.00 ಕೋಟಿಗಳಷ್ಟು ಕ್ರೋಢೀಕೃತ ನಷ್ಟ ಹೊಂದಿರುತ್ತದೆ. ಅಲ್ಲದೆ, ಬ್ಯಾಂಕ್‌ಗಳಿಂದ ಪಡೆದಿರುವ ಸಾಲಗಳು ಸುಸ್ತಿ (ಎನ್.ಪಿ.ಎ.) ಆಗಿರುತ್ತವೆ. ಈಗಾಗಲೇ ಕಾರ್ಖಾನೆಯ ಯಂತ್ರೋಪಕರಣಗಳು, ಜಮೀನು ಮತ್ತು ಕಟ್ಟಡಗಳನ್ನು ಭದ್ರತೆಯಾಗಿ ನೀಡಿ, ವಿವಿಧ ಹಣಕಾಸು ಸಂಸ್ಥೆ/ ಬ್ಯಾಂಕುಗಳಿಂದ ಸಾಲಗಳನ್ನು ಪಡೆಯಲಾಗಿದೆ. ಆದ್ದರಿಂದ ಹೊಸದಾಗಿ ಬ್ಯಾಂಕುಗಳಿಂದ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. 2021-22ನೇ ಸಾಲಿನಲ್ಲಿ ಸುಮಾರು 6 ತಿಂಗಳ ವೇತನ ಪಾವತಿಸಲಾಗಿದೆ. |
| (ಇ) | ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಬಿಲ್ಲು ಪಾವತಿ ಮಾಡದಿರುವುದಕ್ಕೆ ಕಾರಣವೇನು; | ಕಾರ್ಖಾನೆಯಲ್ಲಿ 2021-22ನೇ ಹಂಗಾಮಿನಲ್ಲಿ 54574 ಮೆ. ಟನ್ ಕಬ್ಬು ನುರಿಸಲಾಗಿರುತ್ತದೆ. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರದಂತೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.15.04 ಕೋಟಿಗಳಾಗಿದ್ದು, ಈ ಪೈಕಿ ರೂ.5.42 ಕೋಟಿಗಳನ್ನು ಪಾವತಿಸಿದ್ದು, ಇನ್ನೂ ರೂ.9.62 ಕೋಟಿಗಳಷ್ಟು ಬಾಕಿ ಇರುತ್ತದೆ. ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಸಂಕಷ್ಟದಲ್ಲಿದ್ದು, ಬ್ಯಾಂಕ್ ಸಾಲಗಳು ಸುಸ್ತಿ (ಎನ್.ಪಿ.ಎ.)ಯಾಗಿರುವುದರಿಂದ, ಹೊಸದಾಗಿ ಬ್ಯಾಂಕುಗಳಿಂದ ಸಾಲ ಪಡೆಯಲು ಸಾಧ್ಯವಾಗದೇ ಇರುವುದರಿಂದ ರೈತರಿಗೆ ಕಬ್ಬಿನ ಬಿಲ್ಲು ಪಾವತಿಸಲು ಸಾಧ್ಯವಾಗಿರುವುದಿಲ್ಲ. |
| (ಈ) | ಕಾರ್ಮಿಕರ ಬಾಕಿ ವೇತನ ಹಾಗೂ ರೈತರ ಬಾಕಿಯನ್ನು ಯಾವ ಕಾಲಮಿತಿಯೊಳಗೆ ಪಾವತಿ ಮಾಡಲಾಗುವುದು; | ಕಾರ್ಖಾನೆಯು ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ನೋಂದಣಿಯಾಗಿದ್ದು, ತನ್ನದೇ ಆದ ಆಸ್ತಿ ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತದೆ. ಕಾರ್ಖಾನೆ ತನ್ನ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಲು ಬೇಕಾಗುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು, ಪಾವತಿಸಬೇಕಾಗಿರುತ್ತದೆ. ಆದ್ದರಿಂದ ಕಾರ್ಖಾನೆಯೇ ಈ ಜವಾಬ್ದಾರಿಗಳನ್ನು ತೀರುವಳಿ ಮಾಡಬೇಕಾಗಿರುತ್ತದೆ.<br>ಆದಾಗ್ಯೂ, ಕಾರ್ಖಾನೆಗೆ 2021-22ನೇ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಲು ಅವಶ್ಯವಿರುವ ರೂ.10.00 ಕೋಟಿಗಳ ಸಾಲವನ್ನು |